ನೊಡನೆ ಸೇರಿಸಿದ್ದೇವೆಂದು ಕೂಡ ಹೇಳಿದ್ದೀರಿ. ಹೀಗೆ ಸೇರಿಸಿ ೨ ವರ್ಷಗಳಾಗಿರಬಹುದು. ಆದರೂ ಕೂಡ ಇದುವರೆಗೆ ಷೇರು ಹಣವನ್ನು ಏತಕ್ಕಾಗಿ ವಾಪಸ್ಸು ಕೊಟ್ಟಿಲ್ಲ. ಎಷ್ಟು ಷೇರು ಹಣ ಇದೆ ಮತ್ತು ಅದನ್ನು ಯಾವಾಗ ವಾಪಸ್ಸು ಕೊಡುವುದಕೆ ಏರ್ಪಾಡು ಮಾಡುತ್ತೀರಿ ?

†ಶ್ರೀ ಡಿ. ಬಿ. ಚಂದ್ರೇಗೌಡ.--ಸರ್ಕಾರ ೧೫ ಲಕ್ಷ ರೂಪಾಯಿಗಳನ್ನು ಮತ್ತು ಷೇರು ಮೊಬಲಗು ೪೬ ಸಾವಿರ ರೂಪಾಯಿಗಳನ್ನು ಡಿ.ಸಿ.ಸಿ. ಬ್ಯಾಂಕ್, ಮೈಸೂರಿನಲ್ಲಿ ಡಿಪಾಸಿಟ್ ಮಾಡಿದೆ. ಆ ಬಗ್ಗೆ ಕರೆಸ್ಪಾಂಡೆನ್ಸ್ ಮಾಡುತ್ತಿದ್ದೇವೆ. ಅವರು ವಾಪಸ್ಸು ಕೊಟ್ಟ ತಕ್ಷಣ ಹಣವನ್ನು ವಾಪಸ್ಸು ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಕೆ. ಎಸ್. ಕಾಳಮರಿಗೌಡ.--ಡಿ.ಸಿ.ಸಿ. ಬ್ಯಾಂಕಿನವರಿಗೆ ವಾಪಸ್ಸು ಕೊಡುವುದಕ್ಕೆ ಏನಂ ತೊಂದರೆ ಇದೆ. ಈ ಯೋಜನೆಯನ್ನು ಮತ್ತೊಂದು ಯೋಜನೆಯೊಡನೆ ಸೇರಿಸಿದ ಮೇಲೆ ಷೇರ್ ಹಣವನ್ನು ಕೊಡುವುದಕ್ಕೆ ವಿಳಂಬ ಮಾಡುವುದಾದರೂ ಏಕೆ ? ಹಾರಂಗಿ ಏತ ನೀರಾವರಿ ಯೋಜನೆಗೆ ಎಷ್ಟು ಹಣವನ್ನು ಒದಗಿಸಿದ್ದೀರಿ, ಅದು ಯಾವ ಹಂತದಲ್ಲಿದೆ ಮತ್ತು ಅದನ್ನು ಎಷ್ಟು ವರ್ಷದಲ್ಲಿ ಮುಕ್ತಾಯ ಮಾಡುತ್ತೀರಿ ?

†ಶ್ರೀ ಡಿ. ಬಿ. ಚಂದ್ರೇಗೌಡ --ತೊಂದರೆ ಏನು ಇಲ್ಲ ಷೇರು ಹಣವನ್ನು ವಾಪಸ್ಸು ಕೊಡುವುದಕ್ಕೆ, ಫಾರ್ಮಾಲಿಟೀಸ್ ಫೂರ್ತಿಯಾಗಬೇಕು. ಡಿ.ಸಿ.ಸಿ. ಬ್ಯಾಂಕು ಒಂದು ಸಂಸ್ಥೆ, ಸರ್ಕಾರದ ಹಣವನ್ನು ಅಲ್ಲಿ ಡಿಪಾಸಿಟ್ ಮಾಡಿದ್ದೇವೆ. ಅಲ್ಲಿಂದ ವಾಪಸ್ಸು ತೆಗೆದುಕೊಂಡು ಕೊಡಬೇಕಾಗುತ್ತದೆ. ಸ್ವಲ್ಪ ಕರೆಸ್ಪಾಂಡೆನ್ಸ್ ಇರುವುದರಿಂದ ತಡವಾಗಿದೆ. ಸಾಧ್ಯವಾದಷ್ಟು ಬೇಗ ಕೊಡುವುದಕ್ಕೆ ಪ್ರಯತ್ನ ಮಾಡೋಣ: ಇನ್ನು ಹಾರಂಗಿ ಏತ ನೀರಾವರಿ ಯೋಜನೆ ೬ ಕೋಟಿ ರೂಪಾಯಿನದು. ಅದಕ್ಕೆ ಬೇಕಾದ ಪ್ರಿಲಿಮಿನರೀಸ್ ಮಾಡಿದ್ದೇವೆ. ಈ ವರ್ಷ ಅದಕ್ಕೆ ವಿದ್ಯುಚ್ಛಕ್ತಿ ಒದಗಿಸುವ ವಿಚಾರದಲ್ಲಿ ಕೂಡ ವ್ಯವಹಾರ ನಡೆದಿದೆ. ಎಷ್ಟು ಬೇಗ ಪೂರೈಸುತ್ತೇವೆಂದು ಹೇಳುವುದು ಕಷ್ಟವಾಗುತ್ತದೆ. ಅದಕ್ಕೆ ೧೨,೫೦೦ ಕಿಲೋ ವಾಟ್ಸ್ ವಿದ್ಯುಚ್ಛಕ್ತಿಯನ್ನು ಬಳಸಬೇಕಾಗುತ್ತದೆ. ಅದು ಸುಮಾರು ೩೦ ಸಾವಿರ ಎಕರೆಗೆ ನೀರು ಒದಗಿಸತಕ್ಕ ದೊಡ್ಡ ಯೋಜನೆಯಾದ್ದರಿಂದ ಸ್ವಲ್ಪ ವಿಳಂಬವಾಗಬಹುದು. ಒಟ್ಟಿನಲ್ಲಿ ಸಾಧ್ಯವಾದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

## Total loans availed by Weaker Sections and Artisans under DIR Scheme

1083 SRI VEERAPPA MOILY (Karkala).— Will the Minister for Finance be pleased to state: —

(a) what is the total amount of loan availed by the Weaker Section and Artisans in Karnataka under Differential Rate of Interest from the Nationalised Banks during the period between 1-3-1977 and 31-3-1978 ;

(b) the number of beneficiaries ?

SRI S.M. YAHYA (Minister for Finance).—

(a) On the basis of information furnished by the Nationalised Banks, the total loans availed by the Weaker Sections and Artisans under the Differential Rate of Interest scheme in Karnataka between 1-3-1977 and 31-3-1978 amounts to Rs. 3,12,77,599.

(b) 57,101.

ಶ್ರೀ ಎಂ. ವೀರಪ್ಪ ಮೊಯ್ಲಿ.—೧-೩-೭೭ರಿಂದ ೩೧-೩-೭೮ರವರೆಗೆ ೩ ಕೋಟಿ ೧೨ ಲಕ್ಷ ಚಿಲ್ಲರೆ ಹಣವನ್ನು ದುರ್ಬಲ ವರ್ಗದವರಿಗೆ ಮತ್ತು ಕುಶಲ ಕರ್ಮಿಗಳಿಗೆ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಹಾಗಾದರೆ ಯಾವ ಯಾವ ಬ್ಯಾಂಕುಗಳು ಎಷ್ಟೆಷ್ಟು ಹಣವನ್ನು ಕೊಟ್ಟಿವೆ ಎಂಬುದನ್ನು ತಿಳಿಸಬೇಕು.

† ಶ್ರೀ ಎಸ್.ಎಂ. ಯಾಹ್ಯಾ.—ನಾವು ಬ್ಯಾಂಕಿನವರಿಗೆ ಬರೆದು ಅವರಲ್ಲಿ ಕೇವರು ಮಾತ್ರ ವಿವರ ಕೊಟ್ಟಿದ್ದಾರೆ. ಆ ವಿವರ ಈ ರೀತಿ ಇದೆ.—

| ಸಾಲ ಕೊಟ್ಟಿರತಕ್ಕ ಬ್ಯಾಂಕುಗಳು | ಸಾಲ ಪಡೆದವರ ಸಂಖ್ಯೆ | ಸಾಲದ ಮೊತ್ತ |
|---|---|---|
| ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | ೧೨೮೪೦ | ೭೯,೯೦,೦೦೦ |
| ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | ೭೩೪೦ | ೩೬,೦೮,೦೦೦ |
| ಸ್ಟೇಟ್ ಬ್ಯಾಂಕ್ ಆಫ್ ತಿರುವಾಂಕೂರ್ | — | ೮೪,೬೨,೦೦೦ |
| ಸಿಂಡಿಕೇಟ್ ಬ್ಯಾಂಕ್ | ೧೮೩೧೭ | ೧,೦೨,೬೧,೦೦೦ |
| ಕೆನರಾ ಬ್ಯಾಂಕ್ | ೧೨೭೫೪ | ೪೭,೦೪,೭೫೦ |
| ಇಂಡಿಯನ್ ಓವರ್‌ಸೀಸ್ ಬ್ಯಾಂಕ್ | ೧೧೮೦ | ೭ ೫೦,೬೫೦ |

ಶ್ರೀ ಎಂ. ವೀರಪ್ಪ ಮೊಯ್ಲಿ.—ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಆ ವರ್ಷದ ಆಗ್ರಿಗೇಟ್‌ನಲ್ಲಿ ಶೇಕಡ ಒಂದರಷ್ಟನ್ನು ಕೊಡಬೇಕೆಂದಿರುವುದನ್ನು ಈ ಬ್ಯಾಂಕುಗಳು ಸಮರ್ಪಕವಾಗಿ ನಿರ್ವಹಿಸಿವೆ. ಇನ್ನು ಯಾವ ಯಾವ ಕುಶಲ ಕರ್ಮಿಗಳಿಗೆ ಅಂದರೆ ನೇಕಾರರಿಗೆ ಎಷ್ಟು ಕೊಟ್ಟಿದ್ದಾರೆ, ಬೇರೆ ಬಡಗಿಗಳಿಗೆ ಎಷ್ಟು ಕೊಟ್ಟಿದ್ದಾರೆ, ಹಾಗೂ ಬೇರೆ ಬೇರೆ ವಹಿವಾಟು ಮಾಡತಕ್ಕವರಿಗೆ ಎಷ್ಟು ಹಣ ಕೊಟ್ಟಿದ್ದಾರೆ ?

† ಶ್ರೀ ಎಸ್. ಎಂ. ಯಾಹ್ಯಾ. — ಬ್ಯಾಂಕಿನವರು ಕ್ಲಾಸ್‌ವೈಸ್ ವಿಚಾರ ಹೇಳಿಲ್ಲ. ಅದಲ್ಲದೆ aggregate advances are less than one per cent in India whereas in Karnataka it is 1.2 per cent. It is more than one per cent fixed by the Central Government.

## Gazetted and Non-Gazetted Staff recruited by the Karnataka State Co-operative Apex Bank, Bangalore.

1103 SRI MANIK RAO PATIL (Aurad)—Will the Minister for Co-operation be pleased to state:—

(a) the total strength of the Gazetted and non-gazetted employees recruited by the Karnataka State Co-operative Apex Bank, Bangalore ;

(b) the number of employees gazetted and non-gazetted recruited from Hyderabad Karnataka, Bombay Karnataka and Old Mysore area ?

SRI V.M. KUSHNOOR (Minister for Co-operation)—

(a) & (b) There is no categorisation of posts as Gazetted and non-gazatted in the Bank. But the total strength is 242 with the following breakup :

| | No. of Officers | Clerks | Peons | Total |
|---|---|---|---|---|
| (1) Old Mysore Area | 66 | 59 | 70 | 195 |
| (2) Bombay Karnataka Area | 9 | 13 | 1 | 23 |
| (3) Hyderabad Karnataka Area | 1 | 8 | 5 | 14 |
| (4) Other areas | 5 | 5 | — | 10 |
| Total | 81 | 85 | 76 | 242 |